# ಕರ್ನಾಟಕ ಸರ್ಕಾರ

ಸಂಖ್ಯೆ: ಆರ್‌ಡಿ 50 ಎಲ್‌ಜಿಪಿ 96

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 8-12-2000.

## ಸುತ್ತೋಲೆ

ವಿಷಯ: ಫಡಾ ಜಮೀನುಗಳನ್ನು ರೆಗ್ಯುಲರ ಮಾಡುವ ಬಗ್ಗೆ.

ಉಲ್ಲೇಖ: ಅಧಿಸೂಚನೆ ಸಂಖ್ಯೆ: ಆರ್‌ಡಿ 50 ಎಲ್‌ಜಿಪಿ 96 ದಿನಾಂಕ: 7-9-2000.

---

ರಾಜ್ಯದಲ್ಲಿ ಫಡಾ ಬಿದ್ದ ಜಮೀನುಗಳನ್ನು ರೆಗ್ಯುಲರ ಮಾಡಲು ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 119ಕ್ಕೆ ತಿದ್ದುಪಡಿಯನ್ನು ತಂದು ದಿನಾಂಕ: 7-9-2000ರಂದು ಅಂತಿಮ ಅಧಿಸೂಚನೆ ಹೊರಡಿಸಿ 8-9-2000 ದಿನಾಂಕದಿಂದ ಜಾರಿಗೆ ತರಲಾಗಿದೆ. ಈ ತಿದ್ದುಪಡಿ ಅನ್ವಯ ಫಡಾ ಬಿದ್ದ ಜಮೀನುಗಳನ್ನು ರೆಗ್ಯುಲರ ಮಾಡಲು 8-9-2000ದಿಂದ ಒಂದು ವರ್ಷಗಳವರೆಗೆ ಕಾಲಾವಕಾಶ ಕಲ್ಪಿಸಲಾಗಿದೆ. ಆದ್ದರಿಂದ ಎಲ್ಲಾ ಜಿಲ್ಲಾಧಿಕಾರಿಗಳು ಈ ವಿಷಯದ ಬಗ್ಗೆ ಪ್ರಚುರಪಡಿಸಿ ಅರ್ಜಿಗಳನ್ನು ಸ್ವೀಕರಿಸಿ ಈ ಒಂದು ವರ್ಷದ ಅವಧಿಯ ಒಳಗಾಗಿ ಸ್ವೀಕೃತವಾದ ಎಲ್ಲಾ ಪ್ರಕರಣಗಳನ್ನು ವಿಲೇವಾರಿ ಮಾಡಲು ಕ್ರಮ ಕೈಗೊಳ್ಳುವಂತೆ ಈ ಮೂಲಕ ಸೂಚಿಸಲಾಗಿದೆ. ವಿಷಯದಲ್ಲಿ ಕೈಗೊಂಡ ಕ್ರಮದ ಬಗ್ಗೆ ಸರ್ಕಾರಕ್ಕೆ ವರದಿ ನೀಡುವಂತೆ ಕೋರಲಾಗಿದೆ. (7-9-2000ದಿನಾಂಕದ ಅಧಿಸೂಚನೆಯ ಪ್ರತಿಯನ್ನು ಮಾಹಿತಿಗಾಗಿ ಲಗತ್ತಿಸಿದೆ).

(ಪಿ.ಎಸ್. ಗಣೇಶಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ(ಭೂ.ಮಂ.).

ಎಲ್ಲಾ ಜಿಲ್ಲಾಧಿಕಾರಿಗಳು.
ಎಲ್ಲಾ ವಿಭಾಗಾಧಿಕಾರಿಗಳು.
ಎಲ್ಲಾ ಉಪ ವಿಭಾಗಾಧಿಕಾರಿಗಳು } ಜಿಲ್ಲಾಧಿಕಾರಿಗಳ ಮುಖಾಂತರ.
ಎಲ್ಲಾ ತಹಸೀಲ್ದಾರರುಗಳು

ಎಂಎಸ್ಸಿಯು.

ನಂ. ಆರ್‌ಆರ್‌ಸಿ. 278/2000-01

ತಹಸೀಲ್ದಾರ್, ಚನ್ನರಾಯಪಟ್ಟಣ ತಾಲ್ಲೂಕು ರವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಮುಂದಿನ ಕ್ರಮಕ್ಕಾಗಿ ರವಾನಿಸಿದೆ.

11/1/2001

ಜಿಲ್ಲಾಧಿಕಾರಿಗಳ ಪರವಾಗಿ
ಹಾಸನ ಜಿಲ್ಲೆ, ಹಾಸನ